**International Journal of Academic Research**
P-ISSN: 2348-7666: Impact Factor: 7.215
Homepage: https://www.ijar.org.in/
Volume-13, Issue-1, Jan-Mar-2026
This work is licensed under a Creative Commons Attribution 4.0 International License [CC BY 4.0]

**Research Article**

# ಮೈಸೂರು ಸಂಸ್ಥಾನದಲ್ಲಿ ದಲಿತ ಮತ್ತು ಹಿಂದುಳಿದ ವರ್ಗಗಳಿಗೆ ಸಾಮಾಜಿಕ ನ್ಯಾಯ ಮತ್ತು ಮೀಸಲಾತಿ ದೊರೆಕಿಸುವಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ರವರ ಕೊಡುಗೆಗಳು

# Nalvadi Krishnaraja Wodeyar's Contributions in Achieving Social Justice and Reservation for Dalits and Backward Classes in The Mysore state

**Dr. SREENE NAIK R**
Associate Professor, Department of Economics, Government First Grade College, Nanjangud.

**ಸಾರಾಂಶ (Abstract)**

ಭಾರತದ ಸ್ವಾತಂತ್ರ್ಯ ಶಿಲ್ಪಿ ಮಹಾತ್ಮಗಾಂಧಿ ರವರಿಂದ ರಾಜಶ್ರೀ ಎಂಬ ಬಿರುದಾಂಕಿತ, ಸಾಮಾನ್ಯ ಜನರ ದೊರೆ ಎಂದು ಖ್ಯಾತಿ ಪಡೆದಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ರವರು ದಲಿತ ಮತ್ತು ಹಿಂದುಳಿದ ವರ್ಗದವರಿಗೆ ಜಾರಿ ಗೊಳಿಸಿದ ಮೀಸಲಾತಿ ಮತ್ತು ಸಾಮಾಜಿಕ ನ್ಯಾಯ ಪರಿಕಲ್ಪನೆಯು ಭಾರತದ ಚರಿತ್ರೆಯಲ್ಲಿ ಒಂದು ಸುವರ್ಣ ಅಧ್ಯಯನವಾಗಿದೆ. ಪಾಶ್ಚಿಮಾತ್ಯ ಶಿಕ್ಷಣ ಪಡೆದಿದ್ದ ಇವರು ಸಹಜವಾಗಿಯೇ ನ್ಯಾಯ, ಸ್ವಾತಂತ್ರ್ಯ, ಸಹೋದರತೆ, ಸಾಮಾಜಿಕ ನ್ಯಾಯ ಇತ್ಯಾದಿ ಮೌಲ್ಯಗಳನ್ನು ಮೈಗೂಡಿಸಿಕೊಂಡಿದ್ದರು. ಭಗವಾನ್ ಬುದ್ಧ, ಬಸವಣ್ಣ, ರಾಜಾ ರಾಮ ಮೋಹನ ರಾಯ್, ಸ್ವಾಮಿ ವಿವೇಕಾನಂದ ಮುಂತಾದ ದಾರ್ಶನಿಕರ ಪ್ರಭಾವಕ್ಕೆ ಒಳಗಾಗಿದ್ದರು. ಇದರಿಂದಾಗಿ ಮೈಸೂರು ರಾಜ್ಯವನ್ನು ಭಾರತದ ಉಪಖಂಡದಲ್ಲಿ ಒಂದು ಪ್ರಗತಿಪರ ಹಾಗೂ ಮಾದರಿ ರಾಜ್ಯವನ್ನಾಗಿ ಮಾರ್ಪಡಿಸಿ ಆಧುನಿಕ ಮೈಸೂರಿನ ನಿರ್ಮಾಪಕರಾದರು. ದಲಿತ, ಹಿಂದುಳಿದ, ಅಲ್ಪಸಂಖ್ಯಾತ ಹಾಗೂ ಇತರೆ ದುರ್ಬಲ ವರ್ಗದವರಿಗೆ ಮೀಸಲಾತಿಯನ್ನು ಜಾರಿಗೊಳಿಸಿದ ದಕ್ಷಿಣ ಬಾರತದ ಮೊದಲ ದೊರೆ. ದುರ್ಬಲ ವರ್ಗದವರಿಗೆ ಸಾಮಾಜಿಕ ನ್ಯಾಯವನ್ನು ಒದಗಿಸಲು ಹಲವಾರು ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಇತರೆ ಅತ್ಯುಪಯುಕ್ತ ಪ್ರಗತಿಪರ ಸಂಸ್ಥೆಗಳನ್ನು ಸ್ಥಾಪಿಸಿದರು. ಈ ಹಿನ್ನೆಲೆಯಲ್ಲಿ ನಾಲ್ವಡಿಯವರು ಹೇಗೆ ಸಾಮಾಜಿಕ ನ್ಯಾಯ ಮತ್ತು ಮೀಸಲಾತಿಯನ್ನು ತಮ್ಮ ರಾಜ್ಯದಲ್ಲಿ ದುರ್ಬಲವರ್ಗದವರಿಗಾಗಿ ಜಾರಿಗೊಳಿಸಿ ಎಲ್ಲರ ಶ್ರೇಯೋಭಿವೃದ್ಧಿಗೆ ಕಾರಣರಾದರು ಎಂಬುದು ಈ ಲೇಖನದ ಮುಖ್ಯ ಉದ್ದೇಶವಾಗಿದೆ.

ಬ್ರಾಹ್ಮಣೇತರರಲ್ಲಿ ಒಕ್ಕಲಿಗರು, ಲಿಂಗಾಯಿತರು ಮತ್ತು ಮುಸ್ಲಿಂರ ಜೊತೆಯಲ್ಲಿ ಇತರೆ ಹಿಂದುಳಿದ ಜಾತಿಗಳಾದ ಕುರುಬ, ರೆಡ್ಡಿ, ನಿಮ್ನವರ್ಗದವರು ಸೇರಿಕೊಂಡು ಸಂಘಟಿತರಾಗಿ ಪ್ರಬಲ ಆಂದೋಲನವನ್ನು ರೂಪಿಸಿದ್ದನ್ನು ಗಮನಿಸಿದ ನಾಲ್ವಡಿಯವರು ಹಿಂದುಳಿದ ವರ್ಗದವರಿಗೆ ಕಾನೂನು ಬದ್ದ ಮೀಸಲಾತಿ ನೀಡಬೇಕೆಂದು ನಿರ್ಧರಿಸಿದರು. ಸರ್ಕಾರಿ ಆದೇಶ ಸಂಖ್ಯೆ ಇ.ಎ.ಜಿ.308. ದಿನಾಂಕ 23 ಆಗಸ್ಟ್ 1918 ರಂತೆ ಅಂದಿನ ಮೈಸೂರು ಸಂಸ್ಥಾನದ ಮುಖ್ಯ ನ್ಯಾಯಾದೀಶರಾಗಿದ್ದ ಸರ್ ಲೆಸ್ಲಿ ಮಿಲ್ಲರ್ ರವರ ಅಧ್ಯಕ್ಷತೆಯಲ್ಲಿ ಏಳು ಜನರ ಒಂದು ಆಯೋಗ ಅಸ್ತಿತ್ವಕ್ಕೆ ಬಂತು. ಇದರಿಂದಾಗಿ ಕೆರಳಿದ ವಿಶ್ವೇಶ್ವರಯ್ಯ ನವರು ಕೊನೆಗೆ ವಿದಿಯಿಲ್ಲದೆ 1918 ರ ಡಿಸೆಂಬರ್ 09 ರಂದು ದಿವಾನ್ ಹುದ್ದೆಗೆ ರಾಜೀನಾಮೆ ನೀಡಿದರು. ಇದಾವುದಕ್ಕೂ ತಲೆ ಕೆಡಿಸಿಕೊಳ್ಳದ ನಾಲ್ವಡಿಯವರು ತೆರವಾದ ದಿವಾನ್ ಹುದ್ದೆಗೆ ಮೊಟ್ಟಮೊದಲ ಬಾರಿಗೆ ಹಿಂದುಳಿದ ವರ್ಗದ ಶ್ರೀ ಕಾಂತರಾಜೇ ಅರಸ್ ರವರನ್ನು ನೇಮಕ ಮಾಡಿ ಹೊಸ ಇತಿಹಾಸ ಸೃಷ್ಟಿಸಿದರು. ಮಿಲ್ಲರ್ ಆಯೋಗದ ವರದಿಯ ಆಧಾರದ ಮೆಲೆ ಬ್ರಾಹ್ಮಣೇತರರಿಗೆ 1921 ರಲ್ಲಿ ಮಹಾರಾಜರು ಶೇ 75 ರಷ್ಟು ಮೀಸಲಾತಿಯನ್ನು ಘೋಷಿಸಿದರು. ಇದರಿಂದಾಗಿ ಸಾವಿರಾರು ದಲಿತ, ಮುಸ್ಲಿಂ, ಮತ್ತು ಹಿಂದುಳಿದ ವರ್ಗದ ಜನತೆ ಶಿಕ್ಷಣ ಪಡೆದು ಬದುಕು ಕಟ್ಟಿ ಕೊಳ್ಳುವಂತಾಯಿತು. ನಾಲ್ವಡಿಯವರು ತಮ್ಮ ಸಂಸ್ಥಾನದಲ್ಲಿ ಜಾರಿಯಲ್ಲಿದ್ದ ಅನಿಷ್ಠ ಪದ್ಧತಿಗಳಾದ ಗೆಜ್ಜೆ ಪೂಜೆ, ದೇವದಾಸಿ, ಜೀತಗಾರಿಕೆ ಇತ್ಯಾದಿಗಳನ್ನು ರದ್ದು ಪಡಿಸಿದರು. ಪಂಚಮರಿಗೆ ಅರಮನೆಯೊಳಗೆ ಪ್ರವೇಶ ಕಲ್ಪಿಸಿದರು. ಹೀಗೆ ನಾಲ್ವಡಿಯವರು ಹತ್ತು ಹಲವು ಯೋಜನೆಗಳನ್ನು ಜಾರಿಗೂಳಿಸಿ ದುರ್ಬಲ ವರ್ಗದವರು ಎಲ್ಲರಂತೆ ಸಮಾಜದ ಮುಖ್ಯವಾಹಿನಿಗೆ ಬರುವಂತೆ ಮಾಡಿ ಜನಮೆಚ್ಚಿದ ದೊರೆಯಾಗಿ ಚರಿತ್ರೆಯಲ್ಲಿ ಅಮರರಾಗಿದ್ದಾರೆ.

**Keywords:** ಮೀಸಲಾತಿ, ಸಾಮಾಜಿಕ ನ್ಯಾಯ, ಬ್ರಾಹ್ಮಣೇತರರು

## 1. ಪೀಠಿಕೆ Introduction

ಭಾರತದ ಸ್ವಾತಂತ್ರ್ಯ ಶಿಲ್ಪಿ ಮಹಾತ್ಮಗಾಂಧಿ ರವರಿಂದ ರಾಜಶ್ರೀ ಎಂಬ ಬಿರುದಾಂಕಿತ, ಸಾಮಾನ್ಯ ಜನರ ದೊರೆ ಎಂದು ಖ್ಯಾತಿ ಪಡೆದಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ರವರು ಜಾರಿ ಗೊಳಿಸಿದ ಮೀಸಲಾತಿ ಮತ್ತು ಸಾಮಾಜಿಕ ನ್ಯಾಯ ಪರಿಕಲ್ಪನೆಯು ಭಾರತದ ಚರಿತ್ರೆಯಲ್ಲಿ ಒಂದು ಸಾಹಸಮಯ ಹಾಗೂ ಸುವರ್ಣ ಅಧ್ಯಯನವಾಗಿದೆ. ಪಾಶ್ಚಿಮಾತ್ಯ ಶಿಕ್ಷಣ ಪಡೆದಿದ್ದ ಇವರು

ಸಹಜವಾಗಿಯೇ ನ್ಯಾಯ, ಸ್ವಾತಂತ್ರ್ಯ, ಸಹೋದರತೆ, ಸಾಮಾಜಿಕ ಯೋಗಕ್ಷೇಮ ಇತ್ಯಾದಿ ಮೌಲ್ಯಗಳನ್ನು ಮೈಗೂಡಿಸಿಕೊಂಡಿದ್ದರು. ಭಗವಾನ್ ಬುದ್ಧ, ಬಸವಣ್ಣ, ರಾಜಾ ರಾಮ ಮೋಹನ ರಾಯ್, ಸ್ವಾಮಿ ವಿವೇಕಾನಂದ ಮುಂತಾದ ದಾರ್ಶನಿಕರಿಂದ ಪ್ರಭಾವಕ್ಕೆ ಒಳಗಾಗಿದ್ದರು, ಇದರಿಂದಾಗಿ ಮೈಸೂರು ರಾಜ್ಯವನ್ನು ಭಾರತದ ಉಪಖಂಡದಲ್ಲಿ ಒಂದು ಪ್ರಗತಿಪರ ಹಾಗೂ ಮಾದರಿ ರಾಜ್ಯವನ್ನಾಗಿ ಮಾರ್ಪಡಿಸಿ ಆಧುನಿಕ ಮೈಸೂರಿನ ನಿರ್ಮಾಪಕರಾದರು. ದಲಿತ ಹಿಂದುಳಿದ ಅಲ್ಪಸಂಖ್ಯಾತ ಹಾಗೂ ಇತರೆ ದುರ್ಬಲ ವರ್ಗದವರಿಗೆ ಮೀಸಲಾತಿಯನ್ನು ಜಾರಿಗೊಳಿಸಿದ ದಕ್ಷಿಣ ಬಾರತದ ಮೊದಲ ದೊರೆ. ದುರ್ಬಲ ವರ್ಗದವರಿಗೆ ಸಾಮಾಜಿಕ ನ್ಯಾಯವನ್ನು ಒದಗಿಸಲು ಹಲವಾರು ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಇತರೆ ಅತ್ಯುಪಯುಕ್ತ ಪ್ರಗತಿಪರ ಸಂಸ್ಥೆಗಳನ್ನು ಸ್ಥಾಪಿಸಿದರು, ಈ ಹಿನ್ನೆಲೆಯಲ್ಲಿ ನಾಲ್ವಡಿಯವರು ಹೇಗೆ ಸಾಮಾಜಿಕ ನ್ಯಾಯ ಮತ್ತು ಮೀಸಲಾತಿಯನ್ನು ತಮ್ಮ ರಾಜ್ಯದಲ್ಲಿ ದುರ್ಬಲವರ್ಗದವರಿಗಾಗಿ ಜಾರಿಗೊಳಿಸಿ ಎಲ್ಲರ ಶ್ರೇಯೋಭಿವೃದ್ದಿಗೆ ಕಾರಣರಾದರು ಎಂಬುದು ಈ ಲೇಖನದ ಮುಖ್ಯ ಧ್ಯೇಯ ವಾಗಿದೆ.

## 2. ಅಧ್ಯಯನದ ಉದ್ದೇಶಗಳು Objectives of the Study

ಈ ಅಧ್ಯಯನವು ಈ ಕೆಳಕಂಡ ಉದ್ದೇಶಗಳನ್ನು ಹೊಂದಿದೆ:

1. ಮೈಸೂರು ಸಂಸ್ಥಾನದಲ್ಲಿ ಮೀಸಲಾತಿ ಹೇಗೆ ಜಾರಿಗೊಂಡಿತು ಎಂಬುದರ ಚಾರಿತ್ರಿಕ ಹಿನ್ನೆಲೆಯನ್ನು ಅರಿಯುವುದು.
2. ಮೈಸೂರು ಸಂಸ್ಥಾನದಲ್ಲಿ ಮೀಸಲಾತಿಗಾಗಿ ನಡೆದ ಬ್ರಾಹ್ಮಣೇತರ ಚಳುವಳಿಯನ್ನು ವಿಶ್ಲೇಷಿಸುವುದು
3. ದಲಿತ ಮತ್ತು ಹಿಂದುಳಿದ ವರ್ಗದವರಿಗೆ ಸಾಮಾಜಿಕ ನ್ಯಾಯ ಮತ್ತು ಮೀಸಲಾತಿ ಒದಗಿಸುವಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ರವರ ಕೊಡುಗೆಗಳನ್ನು ಅಭ್ಯಸಿಸುವುದು.

## 3. ಭಾರತದಲ್ಲಿ ಮೀಸಲಾತಿಯ ಚಾರಿತ್ರಿಕ ಹಿನ್ನೆಲೆ Historical Background of Reservation in India

ಮೀಸಲಾತಿ ಎಂದಾಕ್ಷಣ ಎಲ್ಲರಿಗೂ ನೆನಪಿಗೆ ಬರುವುದು ಸಂವಿಧಾನದಲ್ಲಿ ಡಾ.ಬಾಬಾಸಾಹೇಬ್ ಅಂಬೇಡ್ಕರ್ ರವರು ಕಲ್ಪಿಸಿರುವ ಮೀಸಲಾತಿ. ಆದರೆ ಜಾತಿ ಅಥವಾ ಕೋಮು ಆಧಾರಿತ ಮೀಸಲಾತಿಯು ಸ್ವಾತಂತ್ರ್ಯ ಪೂರ್ವದಲ್ಲಿಯೇ ಅನೇಕ ದೇಶೀಯ ದೊರೆಗಳು ಜಾರಿ ಗೊಳಿಸಿರವುದನ್ನು ಕಾಣಬಹುದು. 1882 ರಲ್ಲಿ ಆಗಿನ ಬ್ರಿಟನ್ ಸರ್ಕಾರ ದುರ್ಬಲ ವರ್ಗದವರಿಗೆ ಮೀಸಲಾತಿ ಜಾರಿಗೊಳಿಸಲು ಹಂಟರ್ ಆಯೋಗವನ್ನು ನೇಮಿಸಿತ್ತು. ನಂತರ ಜ್ಯೋತಿಬಾಪುಲೆ ರವರು ಮೊದಲ ಭಾರಿಗೆ ಪೂನಾ ಪ್ರಾಂತ್ಯದಲ್ಲಿ ದುರ್ಬಲ ವರ್ಗದವರಿಗೆ ಶಾಲೆ ತೆರೆದರು. ಬ್ರಾಹ್ಮಣೇತರರಲ್ಲಿ ಜಾಗೃತಿ ಮೂಡಿಸಲು 1873 ರಲ್ಲಿ ಸತ್ಯಶೋಧಕ ಸಮಾಜವನ್ನು ಆರಂಭಿಸಿದರು. ಜ್ಯೋತಿಬಾಪುಲೆರವರಿಂದ ಪ್ರಭಾವಿತರಾದ ಕೊಲ್ಲಾಪುರದ ರಾಜ ಚತ್ರಪತಿ ಶಾಹು ಮಹಾರಾಜರು ತಮ್ಮ ಸಂಸ್ಥಾನದಲ್ಲಿ ಬ್ರಾಹ್ಮಣೇತರರಿಗೆ ಅಂದರೆ ಹಿಂದುಳಿದ ಮತ್ತು ಅಸ್ಪೃಶ್ಯರಿಗೆ 1902 ಜುಲೈ 26 ರಂದು ಒಂದು ಆಜ್ಞೆಯನ್ನು ಹೊರಡಿಸಿ 50% ರಷ್ಟು ಮೀಸಲಾತಿಯನ್ನು ಜಾರಿಗೊಳಿಸಿದರು. ಸಾಹು ಮಹಾರಾಜರ ಈ ಚಾರಿತ್ರಿಕ ಕ್ರಮದಿಂದ ಡಾ.ಬಿ.ಆರ್ ಅಂಬೇಡ್ಕರ್ ರಂತಹ ಮಹಾ ನಾಯಕ ಬೆಳೆದು ಬರಲು ಕಾರಣ ವಾಯಿತು. ಇಷ್ಟೇ ಅಲ್ಲದೆ ಸಾಹು ಮಹಾರಾಜರು 1920 ಮಾರ್ಚ್ 21 ಮತ್ತು 22 ರಲ್ಲಿ ಕೊಲ್ಲಾಪುರದಲ್ಲಿ ಮಹರ್ ಸಮ್ಮೇಳನ ಸಂಘಟಿಸಿ ಡಾ.ಬಿ.ಆರ್. ಅಂಬೇಡ್ಕರ್ ರವರನ್ನು ಜಗತ್ತಿಗೆ ಪರಿಚಯಿಸಿದರು. ಈ ರೀತಿಯ ದಿಟ್ಟ ಕ್ರಮ ತೆಗೆದುಕೊಂಡ ಭಾರತದ ಏಕೈಕ ಮೊದಲ ದೊರೆ ಇವರು. ಆನಂತರ ಇವರಿಂದ ಪ್ರಭಾವಿತರಾಗಿ ನಾಲ್ವಡಿ ಕೃಷ್ಣರಾಜ ಒಡೆಯರ್ ಮೈಸೂರು ಸಂಸ್ಥಾನದಲ್ಲಿ ಹಿಂದುಳಿದ ಹಾಗೂ ನಿಮ್ನ ವರ್ಗದವರಿಗೆ ಮೀಸಲಾತಿಯನ್ನು ಜಾರಿಗೊಳಿಸುತ್ತಾರೆ. ಆ ನಂತರ ಬ್ರಿಟೀಷರು ಮತ್ತು ಸ್ವತಂತ್ರ ಭಾರತ ಸರ್ಕಾರ ಜಾತಿವಾರು ಜನಗಣತಿ ಆರಂಭಿಸಿ ಹಂತ ಹಂತವಾಗಿ ದುರ್ಬಲ ವರ್ಗದವರಿಗೆ ಮೀಸಲಾತಿ ಜಾರಿಗೊಳಿಸುತ್ತಾರೆ.

## 4. ಮೈಸೂರು ಸಂಸ್ಥಾನದಲ್ಲಿ ಮೀಸಲಾತಿಗಾಗಿ ನಡೆದ ಬ್ರಾಹ್ಮಣೇತರರ ಆಂದೋಲನ

ಮೈಸೂರು ಸಂಸ್ಥಾನದಲ್ಲಿ ಸಾಮಾಜಿಕ ನ್ಯಾಯಕ್ಕೆ ಹಾಗೂ ಸಮಾಜ ಪರಿವರ್ತನಾ ಚಳುವಳಿಗೆ ಪ್ರೇರಣೆ ನೀಡಿದವರು ಜನಪರ ಕಾಳಜಿ ಹೊಂದಿದ್ದ ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್. ಇವರು 02 ಆಗಸ್ಟ್ 1902 ರಂದು ಮೈಸೂರು ಮಹಾರಾಜರಾಗಿ ಅಧಿಕಾರ ವಹಿಸಿಕೊಂಡರು. ಇವರು ಅಧಿಕಾರ ವಹಿಸಿಕೊಂಡ ಸಂದರ್ಭದಲ್ಲಿ ಸಂಸ್ಥಾನದ ಉದ್ಯೋಗಗಳಲ್ಲಿ ಮದ್ರಾಸ್ ಮತ್ತು ಆಂದ್ರ ಪ್ರದೇಶದ ಬ್ರಾಹ್ಮಣರೇ ಹೆಚ್ಚಾಗಿ ತುಂಬಿದ್ದರು. ಇದರಿಂದ ಅಸಮದಾನಗೊಂಡಿದ್ದ ಮೈಸೂರಿನ ಬ್ರಾಹ್ಮಣರು ತಮಗೆ ಅನ್ಯಾಯವಾಗಿದೆ ಎಂದು ರಾಜರಿಗೆ ಪತ್ರಬರೆದು ಚಳುವಳಿ ಆರಂಬಿಸಿದರು. ಇದನ್ನು ಸಮಾಧಾನ ಪಡಿಸಲು ಪೂನಾದಲ್ಲಿ ಎಂಜಿನಿಯರ್ ಆಗಿದ್ದ ಸರ್.ಎಂ.ವಿಶ್ವೇಶ್ವರಯ್ಯ ರವರನ್ನು ಮೈಸೂರು ಸಂಸ್ಥಾನದ ಪ್ರಧಾನ ಎಂಜಿನಿಯರ್ ಆಗಿ ನೇಮಕ ಮಾಡಲಾಯಿತು. ನಂತರ ಇವರು 1912 ರಲ್ಲಿ ಮೈಸೂರಿನ ದಿವಾನರಾಗಿ ನೇಮಕ ಗೊಂಡರು.

ಮದ್ರಾಸ್, ಆಂದ್ರ ಹಾಗೂ ಮೈಸೂರು ಬ್ರಾಹ್ಮಣರ ನಡುವಿನ ಒಳಜಗಳದಿಂದ ಜಾಗೃತಗೊಂಡ ಬ್ರಾಹ್ಮಣೇತರರು ಮೈಸೂರು ಪ್ರಾಂತ್ಯದ ಆಡಳಿತ ವ್ಯವಸ್ಥೆಯಲ್ಲಿ ತಮಗೂ ಪಾಲು ಬೇಕೆಂಬ ಕೂಗನ್ನು ಆರಂಭಿಸಿದರು. ಇವರಲ್ಲಿ ಪ್ರಮುಖರಾದವರೆಂದರೆ ಒಕ್ಕಲಿಗರು, ಲಿಂಗಾಯಿತರು ಹಾಗೂ ಮುಸ್ಲಿಮರು. ಇವರು ತಮ್ಮ ಹಕ್ಕು ಹಾಗೂ ಅಧಿಕಾರವನ್ನು ಪಡೆಯಲು ಜಾತಿ ಸಂಘಟನೆಯನ್ನು ಆರಂಭಿಸಿದರು. ಅವುಗಳಂದರೆ, 1904 ರಲ್ಲಿ ಸ್ಥಾಪನೆ ಆದ ವೀರಶೈವ ಮಹಾ ಸಭಾ, 1906 ರಲ್ಲಿ ಸ್ಥಾಪನೆ ಆದ್ದ ಒಕ್ಕಲಿಗರ ಸಂಘ ಹಾಗೂ 1909 ರಲ್ಲಿ ಸ್ಥಾಪನೆ ಆದ ಕೇಂದ್ರ ಮಹಮದ್ ಸಂಘ ಪ್ರಮುಖವಾದವುಗಳು. ಬಡವರು ಮತ್ತು ಹಿಂದುಳಿದ ವರ್ಗದವರ ಮೇಲೆ ಅಪಾರ ಕಾಳಜಿ ಹೊಂದಿದ್ದ ಮಹಾರಾಜರು ಸಹಜವಾಗಿಯೇ ಈ ರೀತಿಯ ಸಂಘಟನೆಗಳಿಗೆ ಬೆಂಬಲ ನೀಡಿದರು. ಹೀಗೆ ಸಂಘಟಿತರಾದ ಹಿಂದುಳಿದ ವರ್ಗದವರು ಆಡಳಿತ ಮತ್ತು ಉದ್ಯೋಗಗಳಲ್ಲಿ ಪಾಲು ಬೇಕೆಂದು ಹಠ ಹಿಡಿದು ಹೋರಾಟ ಆರಂಬಿಸಿದರು. ನಂತರ ಮದ್ರಾಸಿನ ಜಸ್ಟೀಸ್ ಪಾರ್ಟಿಯ ಸ್ಪೂರ್ತಿಯಿಂದ 1917ರಲ್ಲಿ ಎಂ. ಬಸವಯ್ಯನವರ ನಾಯಕತ್ವದಲ್ಲಿ 'ಪ್ರಜಾಮಿತ್ರ ಮಂಡಳಿ' ಎಂಬ ಹೊಸ ಬ್ರಾಹ್ಮಣೇತರರ ರಾಜಕೀಯ ಪಕ್ಷ ಉದಯವಾಯಿತು. ಈ ಹೋರಾಟಕ್ಕೆ ಪ್ರೋ. ಸಿ.ಆರ್. ರೆಡ್ಡಿ, ಕಾಂತರಾಜ್

ಅರಸ್, ಮಿರ್ಜಾ ಇಸ್ಮಾಯಿಲ್ ಮುಂತಾದವರು ಬೆಂಬಲಿಸಿದರು. ದಿನದಿಂದ ದಿನಕ್ಕೆ ಹೆಚ್ಚೆಚ್ಚು ಜನಪ್ರಿಯಗೊಳ್ಳುತ್ತಾ ಬಂದ ಬ್ರಾಹ್ಮಣಣೇತರರ ಚಳುವಳಿ ಜನರನ್ನು ಸಂಘಟಿಸುತ್ತಾ ಬಂತು.

**ಜಸ್ಟೀಸ್ ಮಿಲ್ಲರ್ ಆಯೋಗ**

ಬ್ರಾಹ್ಮಣಣೇತರರಲ್ಲಿ ಒಕ್ಕಲಿಗರು, ಲಿಂಗಾಯಿತರು ಮತ್ತು ಮುಸ್ಲಿಂರ ಜೊತೆಯಲ್ಲಿ ಇತರೆ ಹಿಂದುಳಿದ ಜಾತಿಗಳಾದ ಕುರುಬ, ರೆಡ್ಡಿ, ನಿಮ್ನವರ್ಗದವರು ಸೇರಿಕೊಂಡು ಸಂಘಟಿತರಾಗಿ ಪ್ರಬಲ ಆಂದೋಲನವನ್ನು ರೂಪಿಸಿದ್ದನ್ನು ಗಮನಿಸಿದ ನಾಲ್ವಡಿಯವರು ಹಿಂದುಳಿದ ವರ್ಗದವರಿಗೆ ಕಾನೂನು ಬದ್ದ ಮೀಸಲಾತಿ ನೀಡಬೇಕೆಂದು ನಿರ್ಧರಿಸಿದರು. ಸರ್ಕಾರಿ ಆದೇಶ ಸಂಖ್ಯೆ ಇ.ಎ.ಜಿ.308. ದಿನಾಂಕ 23 ಆಗಸ್ಟ್ 1918 ರಂತೆ ಅಂದಿನ ಮೈಸೂರು ಸಂಸ್ಥಾನದ ಮುಖ್ಯ ನ್ಯಾಯಾದೀಶರಾಗಿದ್ದ ಸರ್ ಲೆಸ್ಲಿ ಮಿಲ್ಲರ್ ರವರ ಅಧ್ಯಕ್ಷತೆಯಲ್ಲಿ ಏಳು ಜನರ ಒಂದು ಆಯೋಗ ಅಸ್ತಿತ್ವಕ್ಕೆ ಬಂತು. ಆಯೋಗದ ಪ್ರಮುಖ ಇತರೆ ಸದಸ್ಯರೆಂದರೆ ಶ್ರೀಕಂಠೇಶ್ವರ ಅಯ್ಯರ್, ಹೆಚ್.ಚನ್ನಯ್ಯ, ಎಂ.ಬಸವಯ್ಯ, ಗುಲಾಬ್ ಅಹಮದ್ ಕಲಮಿ, ಎಂ.ಮುತ್ತಣ್ಣ ಹಾಗೂ ರಂಗಾ ಅಯ್ಯಂಗಾರ್ ರವರು. ಆಯೋಗ ಅಸ್ತಿತ್ವಕ್ಕೆ ಬಂದ ನಂತರ ಎರಡು ತಿಂಗಳ ಒಳಗಾಗಿ ವರದಿ ನೀಡಲು ರಾಜರು ಆದೇಶಿಸಿರುತ್ತಾರೆ. ಈ ಆಯೋಗವು ಮೊದಲ ಸಭೆಯನ್ನು ಸೆಪ್ಟೆಂಬರ್ 03, 1918 ರಲ್ಲಿ ನಡೆಸುತ್ತದೆ. ನಂತರ ಹಲವಾರು ಸಭೆಗಳನ್ನು ನಡೆಸಿ ಹಲವಾರು ಶಿಫಾರಸ್ಸುಗಳನ್ನು ಮಾಡುತ್ತದೆ. ಮಿಲ್ಲರ್ ಆಯೋಗದ ವರದಿಯ ಆಧಾರದ ಮೆಲೆ ಬ್ರಾಹ್ಮಣೇತರರಿಗೆ 1921 ರಲ್ಲಿ ಮಹಾರಾಜರು ಶೇ 75 ರಷ್ಟು ಮೀಸಲಾತಿಯನ್ನು ಘೋಷಿಸಿದರು. ಮಹಾರಾಜರ ಈ ಐತಿಹಾಸಿಕ ದೃಢ ನಿರ್ಧಾರವು ಮೈಸೂರು ಸಂಸ್ಥಾನದ ಆಡಳಿತದಲ್ಲಿ ಸಿಂಹಪಾಲನ್ನು ಪಡೆದಿದ್ದ ಬ್ರಾಹ್ಮಣರ ಏಕಸೌಮ್ಯಕ್ಕೆ ಕೊಡಲಿ ಪೆಟ್ಟು ನೀಡಿತು.ಸಹಜವಾಗಿಯೇ ಮಹಾರಾಜರ ವಿರುದ್ದ ಬ್ರಾಹ್ಮಣರು ಕೆರಳಿದರು. ಮೊದಲಿಂದಲೂ ಮಿಲ್ಲರ್ ಆಯೋಗವನ್ನು ವಿರೋದಿಸುತ್ತಿದ್ದ ವಿಶ್ವೇಶ್ವರಯ್ಯನವರು ಬ್ರಾಹ್ಮಣೇತರರಿಗೆ ಮೀಸಲಾತಿ ನೀಡುವ ರಾಜರ ನೀತಿಯನ್ನು ವಿರೋಧಿಸಿ ಆಯೋಗವನ್ನು ರದ್ದು ಮಾಡುವಂತೆ ಮಹಾರಾಜರನ್ನು ಒತ್ತಾಯಿಸಿದರು. ಇದರಿಂದ ಮನನೊಂದ ಮಹಾರಾಜರು ಬ್ರಾಹ್ಮಣೇತರರ ಏಳಿಗೆಗೆ ತಾವು ಬದ್ದರಾಗಿರುವುದಾಗಿ ಹೇಳಿ ಒಂದು ವೇಳೆ ನೀವು ಬ್ರಾಹ್ಮಣೇತರರ ಮೀಸಲಾತಿಗೆ ವಿರುದ್ದವಾಗಿದ್ದರೆ ದಿವಾನ್ ಹುದ್ದೆಗೆ ರಾಜಿನಾಮೆ ನೀಡಿ ಎಂದು ವಿಶ್ವೇಶ್ವರಯ್ಯನವರಿಗೆ ಸೂಚಿಸಿದರು. ಕೊನೆಗೆ ವಿದಿಯಿಲ್ಲದೆ 1918 ರ ಡಿಸೆಂಬರ್ 09 ರಂದು ವಿಶ್ವೇಶ್ವರಯ್ಯ ನವರು ದಿವಾನ್ ಹುದ್ದೆಗೆ ರಾಜೀನಾಮೆ ನೀಡಿದರು. ಇದಾವುದಕ್ಕೂ ತಲೆ ಕೆಡಿಸಿಕೊಳ್ಳದ ನಾಲ್ವಡಿಯವರು ತೆರವಾದ ದಿವಾನ್ ಹುದ್ದೆಗೆ ಮೊಟ್ಟಮೊದಲ ಬಾರಿಗೆ ಹಿಂದುಳಿದ ವರ್ಗದ ಶ್ರೀ ಕಾಂತರಾಜೇ ಅರಸ್ ರವರನ್ನು ನೇಮಕ ಮಾಡಿ ಹೊಸ ಇತಿಹಾಸ ಸೃಷ್ಟಿಸಿದರು.

**ಮಿಲ್ಲರ್ ಆಯೋಗದ ಪ್ರಮುಖ ಶಿಫಾರಸ್ಸುಗಳು:**

1. ಹಿಂದುಳಿದ ವರ್ಗದವರ ಬಗ್ಗೆ ಒಂದು ಸ್ಪಷ್ಟ ವ್ಯಾಖ್ಯಾನ ನೀಡಿತು : 1911 ರ ಜನಗಣತಿಯಂತೆ ಯಾರು ಶೇ 05 ಕ್ಕಿಂತ ಕಡಿಮೆ ಇಂಗ್ಲೀಷ್ ಸಾಕ್ಷರತೆ ಹೊಂದಿರುತ್ತಾರೋ ಅವರೆಲ್ಲಾ ಹಿಂದುಳಿದವರು ಎಂದು ವ್ಯಾಖ್ಯಾನಿಸುತ್ತದೆ. ಆ ಪ್ರಕಾರ ಹಿಂದುಳಿದವರೆಂದರೆ ಬ್ರಾಹ್ಮಣರು ಮತ್ತು ಆಂಗ್ಲೋ ಇಂಡಿಯನ್‌ರನ್ನು ಹೊರತು ಪಡಿಸಿ ಉಳಿದೆಲ್ಲರನ್ನೂ ಹಿಂದುಳಿದವರು ಎಂದು ವ್ಯಾಖ್ಯಾನಿಸಲಾಯಿತು.
2. ಎಲ್ಲಾ ಜಾತಿಗಳಿಗೆ ವೈಯಕ್ತಿಕವಾಗಿ ಮೀಸಲಾತಿ ನೀಡಿವ ಅಗತ್ಯವಿಲ್ಲ ಎಂದು ಅರಿತ ಆಯೋಗ ಎಲ್ಲಾ ಜಾತಿಗಳನ್ನೂ 3 ಗುಂಪುಗಳಾಗಿ ವಿಂಗಡಿಸುತ್ತದೆ.
   ಅ) ಬ್ರಾಹ್ಮಣರು
   ಆ) ಇತರೆ ಹಿಂದುಳಿದ ಹಿಂದೂ ಜಾತಿಗಳು, ಮುಸ್ಲಿಮರು ಮತ್ತು ಭಾರತೀಯ ಕ್ರೈಸ್ತರು
   ಇ) ದುರ್ಬಲ ವರ್ಗದವರು, ಅಸ್ಪೃಶ್ಯರು/ದಲಿತರು (ಆಯೋಗದಲ್ಲಿ ಪಂಚಮರು ಎಂಬ ಪದ ಬಳಕೆ ಇದೆ)
3. ಅಸ್ಪೃಶ್ಯರಿಗೆ ಪ್ರತ್ಯೇಕ ಶಾಲೆಗಳ ಸ್ಥಾಪನನೆ, ವಿದ್ಯಾರ್ಥಿವೇತನ , ಹಾಸ್ಟೆಲ್ ಗಳನ್ನು ಸ್ಥಾಪಿಸುವುದು
4. ಮುಸ್ಲಿಮರಿಗೆ ಮತ್ತು ಆಂಗ್ಲೋ ಇಂಡಿಯನ್ನರಿಗೆ ಪ್ರತ್ಯೇಕ ಶಾಲೆ. ತೆರೆಯುವುದು
5. ಸಮಾಜ ಸೇವೆಗೆ ಕನಿಷ್ಟ ವಿದ್ಯಾರ್ಹತೆ ನಿಗಧಿಗೊಳಿಸುವುದು
6. ಹಿಂದುಳಿದ ವರ್ಗದವರಿಗೆ ಸೇವೆಗೆ ಸೇರುವ ವಯಸ್ಸು 25 ರಿಂದ 28 ಕ್ಕೆ ಏರಿಸುವುದು.

## 6. ಬ್ರಾಹ್ಮಣ ಮತ್ತು ಬ್ರಾಹ್ಮಣೇತರರ ನಡುವಿನ ಶೈಕ್ಷಣಿಕ ಮತ್ತು ಆರ್ಥಿಕ ಅಂತರಂಗಳು

ಮೈಸೂರು ಸಂಸ್ಥಾನದಲ್ಲಿ ಬ್ರಾಹ್ಮಣ ಮತ್ತು ಬ್ರಾಹ್ಮಣೇತರರ ನಡುವೆ ಶೈಕ್ಷಣಿಕ ಮತ್ತು ಆರ್ಥಿಕವಾಗಿ ಹಲವಾರು ಅಂತರ ಇರುವುದನ್ನು ಈ ಮುಂದಿನ ಅಂಕಿಅಂಶಗಳ ಸಹಾಯದಿಂದ ತಿಳಿಯಬಹುದು.

**ಟೇಬಲ್ 1**: ಮೈಸೂರು ರಾಜ್ಯದಲಿ ಬ್ರಾಹ್ಮಣರು, ಒಕ್ಕಲಿಗರು ಮತ್ತು ಲಿಂಗಾಯತರ ಸಾಕ್ಷರತಾ ಪ್ರಮಾಣ

| ವರ್ಷ | ಬ್ರಾಹ್ಮಣರು | | ಒಕ್ಕಲಿಗರು | | ಲಿಂಗಾಯಿತರು | |
|---|---|---|---|---|---|---|
| | ಒಟ್ಟು ಸಾಕ್ಷರತೆ% | ಆಂಗ್ಲ ಸಾಕ್ಷರತೆ% | ಒಟ್ಟು ಸಾಕ್ಷರತೆ% | ಆಂಗ್ಲ ಸಾಕ್ಷರತೆ% | ಒಟ್ಟು ಸಾಕ್ಷರತೆ% | ಆಂಗ್ಲ ಸಾಕ್ಷರತೆ% |
| 1901 | 68.0 | 10.2 | 14.0 | 0.13 | 4.0 | 0.07 |
| 1911 | 70.5 | 15.2 | 17.7 | 0.22 | 6.2 | 0.12 |
| 1921 | 70.7 | 24.0 | 20.3 | 0.63 | 7.4 | 0.24 |
| 1931 | 78.3 | 33.9 | 30.1 | 1.43 | 12.2 | 0.53 |

| | | | | | | |
|---|---|---|---|---|---|---|
| 1941 | 87.1 | 36.2 | 32.6 | 2.34 | 15.2 | 1.09 |

**ಮೂಲ:** ಜೇಮ್ಸ್ ಮ್ಯಾನರ್, ಪೊಲಿಟಿಕಲ್ ಚೇಂಜ್ ಇನ್ ಇಂಡಿಯನ್ ಸ್ಟೇಟ್ಸ್ (1977), ಮನೋಹರ್ ಪಬ್ಲಿಕೇಷನ್, ನವದೆಹಲಿ

ಟೇಬಲ್ 1 ರಲ್ಲಿ ಸ್ಪಷ್ಟವಾಗಿ ತಿಳಿಯಪಡಿಸುವುದೇನೆಂದರೆ ಬ್ರಾಹ್ಮಣರು, ಒಕ್ಕಲಿಗರು ಮತ್ತು ಲಿಂಗಾಯಿತರ ನಡುವೆ ಒಟ್ಟು ಸಾಕ್ಷರತೆ ಮತ್ತು ಆಂಗ್ಲ ಸಾಕ್ಷರತೆಯಲ್ಲಿ ಬ್ರಾಹ್ಮಣರು ಹಲವು ಪಟ್ಟು ಅಧಿಕವಾಗಿರುವುದು ಕಂಡು ಬರುತ್ತದೆ.

**ಟೇಬಲ್ 2** : ಮೈಸೂರು ರಾಜ್ಯದಲ್ಲಿ ಬ್ರಾಹ್ಮಣ ಮತ್ತು ಬ್ರಾಹ್ಮಣೇತರರ ಉದ್ಯೋಗ ಪ್ರಮಾಣ

| ವರ್ಷ | ಸೇವೆ/ಇಲಾಖೆ | ಬ್ರಾಹ್ಮಣರು % | ಬ್ರಾಹ್ಮಣೇತರರು % |
|---|---|---|---|
| 1918 | ಅಮಲ್ದಾರರು | 56 | 22 |
| 1924 | ಲೋಕೋಪಯೋಗಿ ಇಲಾಖೆ | 62 | 03 |
| 1926 | ಶಿಕ್ಷಣ ಇಲಾಖೆ | 81 | 14 |
| 1927 | ಅಮಲ್ದಾರರು | 59 | 17 |
| 1927 | ಡೆಪ್ಯುಟಿ ಕಮಿಷನರ್ | 08 | – |
| 1927 | ನ್ಯಾಯಾಂಗ ಇಲಾಖೆ | 45 | 13 |

**ಮೂಲ:** Second Backward Class Report-Vol.1, 1986, p-17, GOK, Bangalore

ಟೇಬಲ್ 2 ರಲ್ಲಿ 1918, 1924, 1926 ಮತ್ತು 1927 ರಲ್ಲಿ ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರು ವಿವಿಧ ಹುದ್ದೆಗಳು, ಇಲಾಖೆಗಳಲ್ಲಿ ಹೊಂದಿದ್ದ ಉದ್ಯೋಗ ಪ್ರಮಾಣದ ಹೋಲಿಕೆಯನ್ನು ಪ್ರತಿಬಿಂಬಿಸುತ್ತದೆ. ಎಲ್ಲಾ ಇಲಾಖೆಗಳಲ್ಲಿ ಬ್ರಾಹ್ಮಣರದ್ದೇ ಸಿಂಹಪಾಲು ಇರುವುದನ್ನು ಕಾಣಬಹುದು. ಬ್ರಾಹ್ಮಣೇತರ ಪ್ರಾತಿನಿಧ್ಯ ಅತ್ಯಂತ ಕಡಿಮೆ ಪ್ರಮಾಣ ಇರುವುದನ್ನು ಗುರುತಿಸಬಹುದಾಗಿದೆ.

**ಟೇಬಲ್ 3:** ಬ್ರಾಹ್ಮಣ ಮತ್ತು ಬ್ರಾಹ್ಮಣೇತರರ ಗೆಜಿಟೆಡ್ ಮತ್ತು ನಾನ್ ಗೆಜಿಟೆಡ್ ನೇಮಕಾತಿ ಪ್ರಮಾಣ

| ವರ್ಷ | ಗೆಜಿಟೆಡ್ | | | ನಾನ್ ಗೆಜಿಟೆಡ್ | | |
|---|---|---|---|---|---|---|
| | ಒಟ್ಟು | ಬ್ರಾಹ್ಮಣರು% | ಬ್ರಾಹ್ಮಣೇತರರು% | ಒಟ್ಟು | ಬ್ರಾಹ್ಮಣರು% | ಬ್ರಾಹ್ಮಣೇತರರು% |
| 1918 | 370 | 64.86 | 35.14 | 13946 | 69.64 | 30.36 |
| 1936 | 760 | 61.32 | 38.68 | 22615 | 49.65 | 50.35 |
| 1947 | 1298 | 46.89 | 53.11 | 37820 | 37.50 | 62.50 |
| 1957 | 1797 | 35.72 | 64.28 | 57516 | 27.65 | 72.35 |

**ಮೂಲ:** The Mysore Gazetteer, 1918-1936

ಟೇಬಲ್ 3 ರಲ್ಲಿ ಮೈಸೂರು ಸಂಸ್ಥಾನದಲ್ಲಿ ಬ್ರಾಹ್ಮಣ ಮತ್ತು ಬ್ರಾಹ್ಮಣೇತರರು ಗೆಜಿಟೆಡ್ ಮತ್ತು ನಾನ್ ಗೆಜಿಟೆಡ್ ನೇಮಕಾತಿ ಪ್ರಮಾಣದಲ್ಲಿ ಇರುವ ಅಂತರವನ್ನು ಪ್ರತಿಬಿಂಬಿಸುತ್ತದೆ. 1918 ರಲ್ಲಿ ಒಟ್ಟು 370 ಗೆಜಿಟೆಡ್ ನೇಮಕಾತಿಯಲ್ಲಿ ಬ್ರಾಹ್ಮಣ ಪ್ರಮಾಣ 64.86% ಹಾಗೂ ಬ್ರಾಹ್ಮಣೇತರರ ಪ್ರಮಾಣ ಕೇವಲ 35.14% ರಷ್ಟು ಮಾತ್ರ ಇರುವುದನ್ನು ಕಾಣಬಹುದಾಗಿದೆ. ಉಳಿದ ವರ್ಷಗಳಲ್ಲಿ ಅಂದರೆ ಬ್ರಾಹ್ಮಣೇತರರಿಗೆ ಮೀಸಲಾತಿ ಜಾರಿಯಾದ ನಂತರ ಕ್ರಮೇಣ ಈ ವರ್ಗದ ನೇಮಕಾತಿ ಪ್ರಮಾಣ ಹೆಚ್ಚುತ್ತಾ ಹೋಗುತ್ತಿರುವುದನ್ನು ಕಾಣಬಹುದಾಗಿದೆ.

**ಟೇಬಲ್ 4 :** ಮೈಸೂರು ಸಂಸ್ಥಾನದಲ್ಲಿ ವಿವಿಧ ಸಮುದಾಯಗಳ ಸಾಕ್ಷರತಾ ಮಟ್ಟ ಮತ್ತು ಸರ್ಕಾರಿ ಸೇವೆಗಳಲ್ಲಿ ಅವರ ಪ್ರಾತಿನಿಧ್ಯ

| ಕ್ರ.ಸಂ | ಜಾತಿ/ ಸಮುದಾಯ | ಜನ ಸಂಖ್ಯೆ | ಶೇ. ಒಟ್ಟು ಹಿಂದುಗಳು | ಸಾಕ್ಷರತಾ ಜನಸಂಖ್ಯೆ | ಒಟ್ಟು ಹಿಂದು ಸಾಕ್ಷರತಾ ಜನಸಂಖ್ಯೆ | ಇಂಗ್ಲೀಷ್ ಸಾಕ್ಷರತೆ | ಶೇ. ವಾರು ಒಟ್ಟು ಹಿಂದುಗಳ ಇಂಗ್ಲೀಷ್ ಸಾಕ್ಷರತೆ | ಸರ್ಕಾರಿ ಸೇವೆಯಲ್ಲಿ ಜನರ ಸಂಖ್ಯೆ | ಪ್ರತಿ ಜನ ಸಮುದಾಯದಿಂದ ಉದ್ಯೋಗಸ್ತರ ಶೇ. ಪ್ರಮಾಣ |
|---|---|---|---|---|---|---|---|---|---|
| 1 | **ಬ್ರಾಹ್ಮಣರು** | **193137** | **3.59** | **80409** | **27.35** | **15455** | **75.14** | **9712** | **69.64** |
| 2 | ಕ್ಷತ್ರಿಯರು | 36894 | 0.069 | 6031 | 2.05 | 638 | 3.10 | 220 | 1.58 |
| 3 | ಒಕ್ಕಲಿಗರು | 1328237 | 24.72 | 42206 | 14.35 | 737 | 3.58 | 338 | 2.42 |
| 4 | ಲಿಂಗಾಯಿತರು | 728571 | 13.56 | 66665 | 22.67 | 804 | 3.92 | 504 | 3.61 |
| 5 | ಮೊದಲಿಯಾರ್ | 11871 | 0.22 | 3217 | 1.09 | 799 | 3.88 | 377 | 2.70 |
| 6 | ಇತರೆ ಹಿಂದುಳಿದ | 527891 | 11.08 | 645059 | 21.71 | 1499 | 7.29 | 1001 | 7.18 |

| | | | | | | | | | |
|---|---|---|---|---|---|---|---|---|---|
| | ವರ್ಗ (ಪಂಚಮು ರನ್ನು ಬಿಟ್ಟು) | | | | | | | | |
| 7 | **ಪಂಚಮರು** | **2447636** | **45.54** | **31467** | **10.70** | **636** | **3.09** | **160** | **1.15** |
| 8 | ಮುಸ್ಲಿಮರು | 291708 | 5.11 | 34831 | 10.22 | 1307 | 4.48 | 1078 | 7.73 |
| 9 | ಭಾರತೀಯ ಕ್ರೈಸ್ತರು | 34201 | 0.60 | 7820 | 2.29 | 2431 | 8.33 | 395 | 2.83 |
| 10 | ಆಂಗ್ಲೋ ಇಂಡಿಯನ್ | 5213 | 0.09 | 4199 | 1.23 | 3987 | 13.66 | 156 | 1.22 |
| ಒಟ್ಟು | | 5705359 | 100.00 | 340940 | 100.00 | 29190 | 100.00 | 13941 | 100.00 |

**ಮೂಲ:** 1911 ರ ಗಣತಿ ವರದಿ

**ಟೇಬಲ್ 4** ಮೈಸೂರು ಸಂಸ್ಥಾನದಲ್ಲಿ ವಿವಿಧ ಸಮುದಾಯಗಳ ಸಾಕ್ಷರತಾ ಮಟ್ಟ ಮತ್ತು ಸರ್ಕಾರಿ ಸೇವೆಗಳಲ್ಲಿ ಅವರ ಪ್ರಾತಿನಿಧ್ಯವನ್ನು ಪ್ರತಿಬಿಂಬಿಸುತ್ತದೆ. ಜನಸಂಖ್ಯೆಯಲ್ಲಿ ಕೇವಲ 3.59% ಪ್ರಮಾಣ ಹೋಂದಿರುವ ಬ್ರಾಹ್ಮಣ ಸಮುದಾಯವು ಒಟ್ಟು ಉದ್ಯೋಗದಲ್ಲಿ 69.64% ರಷ್ಟು ಇರುವುದನ್ನು ಕಾಣಬಹುದಾಗಿದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ವಿಷಯವೆಂದರೆ ಒಟ್ಟು ಜನಸಂಖ್ಯೆಯಲ್ಲಿ ಅತಿ ಹೆಚ್ಚು ಇರುವ (45.54%) ಪಂಚಮ ಸಮುದಾಯದವರ ಸಾಕ್ಷರತಾ ಮಟ್ಟ ಮತ್ತು ಸರ್ಕಾರಿ ಸೇವೆಗಳಲ್ಲಿ ಅವರ ಪ್ರಾತಿನಿಧ್ಯ ಅತ್ಯಂತ ಕನಿಷ್ಟ ಮಟ್ಟದಲ್ಲಿ (1.15%) ಇರುವುದನ್ನು ಕಾಣಬಹುದಾಗಿದೆ. ಪಂಚಮರ ಪರಸ್ಥಿತಿಯೇ ಉಳಿದ ಸಮುದಾಯದವರದು ಅಗಿರುವುದನ್ನು ಮೇಲಿನ ಅಂಕಿಸಂಖ್ಯೆಗಳಿಂದ ತಿಳಿಯಬಹುದಾಗಿದೆ.

## 7. ಸಾಮಾಜಿಕ ನ್ಯಾಯ ಹಾಗೂ ಮೀಸಲಾತಿ ಜಾರಿಗಾಗಿ ನಾಲ್ವಡಿಯವರು ತೆಗೆದುಕೊಂಡ ಕ್ರಮಗಳು

ಈಗಾಗಲೇ ವಿಶ್ಲೇಷಣೆ ಮಾಡಿರುವ ಪ್ರಕಾರ ನಾಲ್ವಡಿಯವರು ಮೀಸಲಾತಿ ಜಾರಿಗಾಗಿ ತೆಗೆದುಕೊಂಡ ಕ್ರಮಗಳು ರಾತ್ರೋರಾತ್ರಿ ತೇಗೆದುಕೂಂಡ ತೀರ್ಮಾನದಂತೆ ಕಾಣುವುದಿಲ್ಲ. ಇದರ ಹಿಂದೆ ಬ್ರಾಹ್ಮಣೇತರ ಚಳುವಳಿಯ ಒತ್ತಡವಿತ್ತು. ಮಿಲ್ಲರ್ ಆಯೋಗದ ಶಿಫಾರಸ್ಸುಗಳನ್ನು ಕೂಲಂಕುಶವಾಗಿ ಪರಿಶೀಲಿಸಿದರು. ಬ್ರಾಹ್ಮಣೇತರರಿಗೆ ಮೀಸಲಾತಿ ನೀಡುವ ವಿಚಾರದಲ್ಲಿ ಬ್ರಾಹ್ಮಣರ ಪ್ರತಿರೋಧವನ್ನೂ ಸಹ ನಾಲ್ವಡಿಯವರು ತುಂಬಾ ಸೂಕ್ಷ್ಮವಾಗಿಯೇ ಗಮನಿಸಿ ಮೀಸಲಾತಿ ಜಾರಿ ಮಾಡುತ್ತಾರೆ. ಮಿಲ್ಲರ್ ಆಯೋಗದ ವರದಿಯಲ್ಲಿ ಬ್ರಾಹ್ಮಣರ ಮತ್ತು ಬ್ರಾಹ್ಮಣೇತರರ ನಡುವೆ ಶೈಕ್ಷಣಿಕ, ಸಾಮಾಜಿಕ ಮತ್ತು ಉದ್ಯೋಗಗಳಲ್ಲಿ ಸಾಕಷ್ಟು ವ್ಯತ್ಯಾಸ ಇರುವದನ್ನು ಕಂಡು ಬ್ರಾಹ್ಮಣೇತರರಿಗೆ 75% ರಷ್ಟು ಮೀಸಲಾತಿಯನ್ನು ಮೈಸೂರು ಸಂಸ್ಥಾನದಲ್ಲಿ ನಾಲ್ವಡಿಯವರು ಜಾರಿಗೊಳಿಸುತ್ತಾರೆ.

ನಾಲ್ವಡಿಯವರು ಮೈಸೂರು ಸಂಸ್ಥಾನದಲ್ಲಿ ದಲಿತ ಹಾಗೂ ಇತರೆ ಹಿಂದುಳಿದ ವರ್ಗಗಳ ಏಳಿಗೆಗಾಗಿ ಶೈಕ್ಷಣಿಕ, ಸಾಮಾಜಿಕ ಮತ್ತು ಉದ್ಯೋಗಗಳ ವಿಚಾರದಲ್ಲಿ ತೆಗೆದುಕೂಂಡ ಕ್ರಮಗಳನ್ನು ಈ ಕೆಳಕಂಡಂತಿವೆ:

1. 1914 ರಲ್ಲಿ ಅಮಲ್ದಾರರ ಹುದ್ದೆಗಳ ನೇಮಕಾತಿಯಲ್ಲಿ ಹಿಂದುಳಿದವರಿಗೆ ಕಡಿಮೆ ಅರ್ಹತೆ ನಿಗದಿಗೊಳಿಸಿ ಆಯ್ಕೆ ಆಗುವಂತೆ ಮಾಡಿದರು.
2. 1915 ರಲ್ಲಿ ಶಿರಸ್ತೆದಾರ ಪದವಿಗಳಿಗೆ ನೇಮಕ ಮಾಡುವಾಗ ಅರ್ಹರಾದ ಹಿಂದುಳಿದವರಿಗೆ ಪ್ರಥಮ ಆದ್ಯತೆ ನೀಡುವಂತೆ ಆದೇಶಿಸಿದರು.
3. ಪ್ರಥಮ ಭಾರಿಗೆ ಆರು ಕಮೀಷನರ್ ಹುದ್ದೆಗಳ ಪೈಕಿ ಮೂರು ಹುದ್ದೆಗಗಳು ಹಿಂದುಳಿದವರಿಗೆ ಮೀಸಲು ಮಾಡಿದರು.
4. ಮೈಸೂರು ವಿಶ್ವವಿದ್ಯಾಲಯದ ಸೆನೆಟ್‌ಗೆ ಕೆ. ಮ್ಯಾಥ್ಯು (ಭಾರತೀಯ ಕ್ರೈಸ್ಥ) ಹಾಗು ಲಿಂಗಾಯತ ಮುಖಂಡ ಶ್ರೀ ಎಂ. ಬಸವಯ್ಯರವರನ್ನು ನೇಮಕ ಮಾಡಿದರು
5. ಪ್ರಜಾಪ್ರತಿನಿಧಿ ಸಭೆಗೆ ಮತ್ತು ನ್ಯಾಯ ವಿಧೇಯಕ ಸಭೆಗಳಲ್ಲಿ ಬ್ರಾಹ್ಮಣೇತರರಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡಿದರು.
6. ಹಿಂದುಳಿದ ವರ್ಗದವರಾದ ಶ್ರೀ ಕಾಂತರಾಜ್ ಅರಸ್, ಮಿರ್ಜಾ ಇಸ್ಮಾಯಿಲ್‌ರನ್ನು ದಿವಾನರಾಗಿ ನೇಮಕ ಮಾಡಿದರು
7. ಅಸ್ಪೃಶ್ಯರಿಗಾಗಿ ಮೊದಲ ಭಾರಿಗೆ ಉಸ್ಕೂರು ಮತ್ತು ಟಿ. ನರಸಿಪುರದಲ್ಲಿ ಶಾಲೆ ಆರಂಭಿಸಿದರು. ನಂತರ ತಮ್ಮ ಆಡಳಿತ ಅವಧಿಯಲ್ಲಿ 800 ಶಾಲೆಗಳನ್ನು ಅಸ್ಪೃಶ್ಯರಿಗಾಗಿ ಆರಂಭಿಸಿದರು.
8. 1918 ರಲ್ಲಿ ಶಾಲಾ ಪ್ರವೇಶಕ್ಕೆ ಜಾತಿ ಆಧಾರಕ ಅಂಶವನ್ನು ರದ್ದು ಪಡಿಸಿದರು.
9. ಮೊದಲ ಭಾರಿಗೆ ಸ್ತೀಯರಿಗೆ ಶಿಕ್ಷಣ ಕಡ್ಡಾಯಗೊಳಿಸಿ ಪ್ರತ್ಯೇಕ ಶಾಲೆಗಳನ್ನು ಆರಂಬಿಸಿದರು.
10. ಅಸ್ಪೃಶ್ಯರಿಗಾಗಿ ಮೊದಲ ಭಾರಿಗೆ ಪ್ರತ್ಯೇಕ ಹಾಸ್ಟಲ್‌ಗಳನ್ನು ಆರಂಭಿಸಿದರು.
11. ಮುಸ್ಲಿಂ ಜನಾಂಗದ ಮಕ್ಕಳಿಗೆ ಉರ್ದು ಶಾಲೆಗಳನ್ನು ಆರಂಭಿಸಿದರು.
12. 1919 ರಲ್ಲಿ ಅಸ್ಪೃಶ್ಯರ ಹಾಗೂ ಹಿಂದುಳಿದ ವರ್ಗಗಳ ಸಮಸ್ಯೆಗಳ ಕುರಿತು ಚರ್ಚಿಸಲು ಡಿಪ್ರೆಸ್ಡ್ ಕ್ಲಾಸ್ ಕಾನ್ಫರೆನ್ಸ್ ಏರ್ಪಾಡು ಮಾಡಿದರು. ಈ ಕಾನ್ಫರೆನ್ಸ್‌ಗೆ ಕೋಲ್ಹಾಪುರದ ಮಹಾರಾಜ ಶಾಹುರವರನ್ನು ಆಹ್ವಾನಿಸುತ್ತಾರೆ. ಶಾಹುರವರು ದೆಹಲಿಯಲ್ಲಿ ಮುಖ್ಯವಾದ ಸಭೆ ಇದ್ದ ಕಾರಣ ತಮ್ಮ ಪರವಾಗಿ ತಮ್ಮ ಸಂಸ್ಥಾನದಿಂದ ಪ್ರತಿನಿಧಿಯಾಗಿ ವಿ.ಆರ್. ಶಿಂಧೆಯವರನ್ನು ಕಳುಹಿಸಿದ್ದರು.

ಸಾಮಾಜಿಕ ನ್ಯಾಯ ಒದಗಿಸಲು ಮೈಸೂರು ಸಂಸ್ಥಾನದಲ್ಲಿ ನಾಲ್ವಡಿಯವರು ಈ ಕೆಳಕಂಡ ಕ್ರಮಗಳನ್ನು ಕೈಗೊಂಡರು:

1. 1919 ರಲ್ಲಿ ವಿಶೇಷ ಕಾಯ್ದೆ ತಂದು ದೇವದಾಸಿ ಪದ್ಧತಿಯನ್ನು ನಿಷೇಧಗೊಳಿಸಿದರು.
2. 1927 ರಲ್ಲಿ ಸ್ತ್ರೀಯರಿಗೆ ಮೊದಲ ಭಾರಿಗೆ ಮತದಾನದ ಹಕ್ಕನ್ನು ಜಾರಿಗೊಳಿಸಿದರು.
3. 1936 ಜುಲೈ 14 ರಂದು ವೇಶ್ಯಾವಾಟಿಕೆಯನ್ನು ತಡೆಗಟ್ಟಲು 'ಸಪ್ರೆಸನ್ ಆಫ್ ಇಮ್ಮೋರಲ್ ಟ್ರಾಫಿಕ್ ಆಕ್ಟ್' ಜಾರಿಗೆ ತಂದರು.
4. 1936 ರಲ್ಲಿ ಮೊದಲ ಭಾರಿಗೆ ಅಸ್ಪೃಶ್ಯರಿಗೆ ಅರಮನೆಯೊಳಗೆ ಪ್ರವೇಶಾವಕಾಶ ಕಲ್ಪಿಸಿದರು.
5. 1938 ಜುಲೈ 7 ರಂದು ಮೈಸೂರು ಹಿಂದು ವಿಡೊ ರಿಮ್ಯಾರೇಜ್ ಅಕ್ಟ್ ಜಾರಿಗೊಳಿಸಿ ವಿಧವೆಯರಿಗೆ ಪುನರ್ ವಿವಾಹವಾಗಲು ಅವಕಾಶ ಒದಗಿಸಿದರು.
6. ಚೇವಸ್ಥಾನಗಳಲ್ಲಿ ನಡೆಯುತ್ತಿದ್ದ ನೃತ್ಯವನ್ನು (ಗೆಜ್ಜೆಪೂಜೆ) ನಿಷೇದಿಸಿದರು.
   ಹೀಗೆ ಮೈಸೂರು ಸಂಸ್ಥಾನದಲ್ಲಿ ನಾಲ್ವಡಿಯವರು ದಲಿತರಿಗೆ ಹಾಗೂ ಹಿಂದುಳಿದ ವರ್ಗದ ಜನರಿಗೆ ಸಾಮಾಜಿಕ ನ್ಯಾಯ ಮತ್ತು ಮೀಸಲಾತಿ ಒದಗಿಸಿ ಸಮಾಜದ ಮುಖ್ಯವಾಹಿನಿಗೆ ಬರಲು ಕಾರಣರಾದರು.

**8. ಕೊನೆ ಮಾತು**

ನಾಲ್ವಡಿಯವರು ಮೈಸೂರು ಸಂಸ್ಥಾನದಲ್ಲಿ ದಲಿತ ಹಾಗೂ ಇತರೆ ಹಿಂದುಳಿದ ವರ್ಗಗಳ ಏಳಿಗೆಗಾಗಿ ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕ ಸೌಲಭ್ಯಗಳನ್ನು ಜಾರಿಗೊಳಿಸಿ ಎಲ್ಲರಂತೆ ಮುಖ್ಯವಾಹಿನಿಗೆ ಬರುವಂತೆ ಮಾಡಿ ಜನ ಮೆಚ್ಚಿದ ದೊರೆಯಾಗಿ ಇತಿಹಾಸದಲ್ಲಿ ಅಮರರಾಗಿದ್ದಾರೆ. ನಾಲ್ವಡಿಯವರ ಬಗ್ಗೆ ಏನೇ ವಿಮರ್ಶೆಗಳಿದ್ದರೂ ಸಹ ದೇಶಿಯ ದೊರೆಗಳ ಪೈಕಿ ಶಾಹು ಮಹಾರಾಜ ನಂತರ ಅಸ್ಪೃಶ್ಯರಿಗೆ ಮೀಸಲಾತಿ ನೀಡಿದ ಮೊದಲ ದೊರೆ ನಾಲ್ವಡಿಯವರು ಎಂಬುದನ್ನು ಯಾರೂ ಮರೆಯುವಂತಿಲ್ಲ. ಡಿ. ವಿ. ಜಿ. ಮಾತಿನಲ್ಲಿ ಹೇಳುವುದಾದರೆ "1902 ರಿಂದ 1940 ರ ಅವಧಿಯು ಮೈಸೂರಿನ ಸುವರ್ಣಯುಗ" ಎಂದು ಬಣ್ಣಿಸಿದ್ದಾರೆ.

ವಿಷಾದಕರ ಸಂಗತಿ ಎಂದರೆ ಮೀಸಲಾತಿ ಪಡೆದುಕೊಂಡ ಹಿಂದುಳಿದ ಮೇಲ್ವರ್ಗದ ಸಮುದಾಯಗಳು ರಾಜರು ಪ್ರಜಾಪ್ರಭುತ್ವದ ವಿರೋಧಿ ಎಂಬ ಹಣೆಪಟ್ಟಿ ಕಟ್ಟಿ ಜವಾಬ್ದಾರಿ ಸರ್ಕಾರಕ್ಕಾಗಿ ಹೋರಾಟ ಆರಂಭಿಸುತ್ತಾರೆ. ಇದಕ್ಕೆಲ್ಲಾ ಕುಮ್ಮಕ್ಕು ನೀಡಿದವರು ಈ ಮುಂಚೆ ಇದೇ ಮೀಸಲಾತಿಯನ್ನು ವಿರೋಧಿಸಿದವರು ಎಂಬುದು ಇಲ್ಲಿ ಗಮನಿಸ ಬೇಕಾದ ವಿಷಯ. 1938ರ ಶಿವಪುರ ಧ್ವಜ ಸತ್ಯಾಗ್ರಹ ಹಾಗೂ ಕೋಲಾರ ಜಿಲ್ಲೆಯ ವಿಧುರಾಶ್ವತ್ಥ ಘಡಟನೆಗಳಿಂದ ಸಾಕಷ್ಟು ನೊಂದುಕೊಂಡರು. ಈ ರೀತಿಯ ಕಹಿ ಘಟನೆಗಳಿಂದ ನೋಂದು ಅನಾರೋಗ್ಯಕ್ಕೆ ತುತ್ತಾಗಿ ಕೊನೆಗೆ 1940 ಆಗಸ್ಟ್ 3 ರಂದು ಕೊನೆಯುಸಿರೆಳೆದರು.

**ಪರಾಮರ್ಶನ ಗ್ರಂಥಗಳು**


1. ಮಿಲ್ಲರ್ ಆಯೋಗದ ವರದಿ (1919) ಮೈಸೂರು ಸಂಸ್ಥಾನ, ಮೈಸೂರು
2. ಧನಂಜಯ ಕೀರ್ " ಜ್ಯೋತಿ ಬಾಫುಲೆ" ಪಾಪುಲರ್ ಪ್ರಕಾಶನ, ಮುಂಬಯಿ
3. ಕರ್ನಾಟಕ ಸರ್ಕಾರ (1994) "ಛತ್ರಪತಿ ಶಾಹು– ದಿ ಪಿಲ್ಲರ್ ಆಫ್ ಸೋಸಿಯಲ್ ದೆಮಾಕ್ರಸಿ", ಶಿಕ್ಷಣ ಇಲಾಖೆ, ಬೆಂಗಳೂರು
4. ಕೃಷ್ಣಮೂರ್ತಿ ಚಮರಂ (2012) "ಮೀಸಲಾತಿ ಮರ್ಮ", ಲಿಪಿಗ್ರಾಫಿ ಪ್ರಕಾಶಕರು, ಮೈಸೂರು
5. The Mysore Gazetteer, 1918-1936
6. 1911 ರ ಗಣತಿ ವರದಿ
7. Second Backward Class Report-Vol.1, 1986, GOK, Bangalore
8. ಜೇಮ್ಸ್ ಮ್ಯಾನರ್,(1977) "ಪೊಲಿಟಿಕಲ್ ಚೇಂಜ್ ಇನ್ ಇಂಡಿಯನ್ ಸ್ಟೇಟ್ಸ್", ಮನೋಹರ್ ಪಬ್ಲಿಕೇಷನ್, ನವದೆಹಲಿ


**Citation:** Dr. SREENE NAIK R. 2026. **ಮೈಸೂರು ಸಂಸ್ಥಾನದಲ್ಲಿ ದಲಿತ ಮತ್ತು ಹಿಂದುಳಿದ ವರ್ಗಗಳಿಗೆ ಸಾಮಾಜಿಕ ನ್ಯಾಯ ಮತ್ತು ಮೀಸಲಾತಿ ದೊರೆಕಿಸುವಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ರವರ ಕೊಡುಗೆಗಳು**". International Journal of Academic Research, 13(1): 190-195.

**Copyright:** ©2026 Dr. SREENE NAIK R.This is an open-access article distributed under the terms of the Creative Commons Attribution License (https://creativecommons.org/licenses/by/4.0/), which permits unrestricted use, distribution, and reproduction in any medium, provided the original author and source are credited.